**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯಾಲಯ**
**ಅಫಜಲಪೂರ.**

**ಸಿ.ಸಿ. ನಂ.139/2018**

ಅಫಜಲಪೂರ ಪೊಲೀಸ್ ಠಾಣೆ

// ವಿರುದ್ಧ //

ಸಿದ್ದಪ್ಪ ಮತ್ತು ಇತರರು

**ಃದೋಷಾರೋಪಣೆಃ**

1) ಸಿದ್ದಪ್ಪ ತಂದೆ ಭೀಮಶಾ ಲಾಳಸಂಗಿ
ವ಼ 35 ವರ್ಷ, ಉಃ ಕ್ರೂಜರ ಚಾಲಕ,

2) ಪುಂಡಲಿಕ ತಂದೆ ಭೀಮಶಾ ಲಾಳಸಂಗಿ
ವ಼ 23 ವರ್ಷ, ಉಃ ಒಕ್ಕಲುತನ,

3) ಪರಶುರಾಮ @ ಪರಮೇಶ್ವರ ತಂದೆ ಭೀಮಶಾ ಲಾಳಸಂಗಿ
ವ಼ 28 ವರ್ಷ, ಉಃ ಕೂಲಿ,

4) ನಾಸೀರ್ ತಂದೆ ಮಕ್ತುದಸಾಬ ಚೌದರಿ
ವ಼ 22 ವರ್ಷ, ಉಃ ಜೀಪ್ ಚಾಲಕ,
ಸಾಃ ಕರಜಗಿ ಗ್ರಾಮ, ತಾಃ ಅಫಜಲಪೂರ.
ಆರೋಪಿತರಾದ ನಿಮ್ಮ ಮೇಲೆ...

ನಾನು **ಪ್ರಶಾಂತ ಬಾದವಾಡಗಿ,** ಬಿ.ಎ. ಎಲ್ಎಲ್ಬಿ (ಸ್ಪೇಷಲ್) ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಅಫಜಲಪುರ. ಆರೋಪಿಸುವುದೇನೆಂದರೆ,

ಮೊದಲನೇಯದಾಗಿ ದಿಃ 15.05.2017 ರಂದು ಬೆಳಿಗ್ಗೆ 7ಃ00 ಗಂಟೆಯ ಸಮಯದಲ್ಲಿ ಕರಜಗಿ ಸೀಮಾಂತರದ ಹೈದ್ರಾ ರೋಡಿನ ಅಮೀರಮಜಾನ ಜಮೀನಿನ ಹತ್ತಿರ ಆರೋಪಿತರು ಅಪರಾಧ ಮಾಡುವ 'ಏಕೋದ್ದೇಶವನ್ನು ಹೊಂದಿ ನಿಮ್ಮಲ್ಲಿ 1 ನೇ ಆರೋಪಿತನು ಬೋಸಡಿ ಮಗನೆ ಎಂದು, 2 ಮತ್ತು 3 ನೇ ಆರೋಪಿತರು ಬೋಸಡಿ ಮಗನೆ ನಿಂದು ತಿಂಡಿನೇ ಜಾಸ್ತಿಯಾಗಿದೆ ಎಂದು ಅವಾಚ್ಯ ಶಬ್ದಗಳಿಂದ ಬೈದು

ಉದ್ದೇಶಪೂರ್ವಕವಾಗಿ ಅವಮಾನಗೊಳಿಸಿರುವ ಕಾರಣ **ಭಾರತ ದಂಡ ಸಂಹಿತೆ ಕಲಂಃ 504 ಸಹವಾಚಕ 34** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಅದೇ ಸಮಯದಲ್ಲಿ ಸದರಿ ವಿಷಯಕ್ಕಾಗಿ, ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ, ಆರೋಪಿತರು ಕೈಯಿಂದ ಹೊಡೆದು, ಕಾಲಿನಿಂದ ಒದ್ದು ಚಾಸಾ-1 ರವರಿಗೆ ಸಾದಾ ಸ್ವರೂಪದ ಗಾಯ ಉಂಟುಪಡಿಸಿ ಆ ಮೂಲಕ **ಭಾರತ ದಂಡ ಸಂಹಿತೆ ಕಲಂಃ 323 ಸಹವಾಚಕ 34** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಮೂರನೇಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಅದೇ ಸಮಯದಲ್ಲಿ ಸದರಿ ವಿಷಯಕ್ಕಾಗಿ, ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ ನಿಮ್ಮಲ್ಲಿ 4 ನೇ ಆರೋಪಿತನು ಚಾಸಾ-1 ರವರು ತಪ್ಪಿಸಿಕೊಂಡು ಹೋಗದಂತೆ ಹಿಡಿದುಕೊಂಡು ಅಕ್ರಮವಾಗಿ ತಡೆದ ಕಾರಣ **ಭಾರತ ದಂಡ ಸಂಹಿತೆ ಕಲಂಃ 341 ಸಹವಾಚಕ 34** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ನಾಲ್ಕನೇಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಅದೇ ಸಮಯದಲ್ಲಿ ಸದರಿ ವಿಷಯಕ್ಕಾಗಿ, ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ, ನಿಮ್ಮಲ್ಲಿ 2 ನೇ ಆರೋಪಿತನು ಬಡಿಗೆಯಿಂದ ಚಾಸಾ-2 ರವರ ಬೆನ್ನಿಗೆ ಹೊಡೆದು ಆ ಮೂಲಕ ಸಾದಾ ರಕ್ತಗಾಯ ಹಾಗೂ ಗುಪ್ತಗಾಯ  ಉಂಟುಪಡಿಸಿ ಆ ಮೂಲಕ **ಭಾರತ ದಂಡ ಸಂಹಿತೆ ಕಲಂಃ 324 ಸಹವಾಚಕ 34** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಕೊನೇಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಅದೇ ಸಮಯದಲ್ಲಿ ಸದರಿ ವಿಷಯಕ್ಕಾಗಿ ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ 'ಮಗನೆ ನಿನಗೆ ಜೀವಸಹಿತ ಬಿಡುವುದಿಲ್ಲ' ಎಂದು ಚಾಸಾ-1 ರವರಿಗೆ ಜೀವದ ಬೆದರಿಕೆ ಹಾಕಿ ಆ ಮೂಲಕ **ಭಾರತ ದಂಡ ಸಂಹಿತೆ ಕಲಂಃ 506 ಸಹವಾಚಕ 34** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ದಿನಾಂಕಃ 06.07.2018 ಜೆ.ಎಮ್.ಎಫ್.ಸಿ. ಅಫಜಲಪೂರ.

# ಆರೋಪಿತರ ಹೇಳಿಕೆ

ಪ್ರ-1 ನಿಮಗೆ ಮೇಲೆ ಓದಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೆ?
ಉಃ

ಪ್ರ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆ ಬಯಸುತ್ತಿಯೋ?
ಉಃ

**(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಹೇಳಿದ ಆರೋಪಣೆಗಳನ್ನು ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರುಗಳು ನೀಡಿದ ಉತ್ತರವನ್ನು ಯತಾಸ್ಥಿತಿಯಲ್ಲಿ ಬರೆದುಕೊಂಡಿದ್ದು ನಿಜವಿರುತ್ತದೆ)**

**ದಿನಾಂಕಃ** 06.07.2018 **ಜೆ.ಎಮ್.ಎಫ್.ಸಿ. ಅಫಜಲಪೂರ.**